**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.1858/2022.**

ಪಿರ್ಯಾದುದಾರರುಃ– ಜನತಾ ಕೋ–ಆಪರೇಟಿವ್ ಸೊಸೈಟಿ.,
ಶಾಖೆಃ ಹೊನ್ನಾವರ,
ಪ್ರತಿನಿಧಿಸುವವರು,
ಕೃಪಾ ನಾಯ್ಕ,
ವೃತ್ತಿಃ– ವ್ಯವಸ್ಥಾಪಕರು
ತಾಲೂಕುಃ ಹೊನ್ನಾವರ, (ಉ.ಕ).

**–ವಿರುದ್ಧ–**

ಆರೋಪಿಯ ಹೆಸರುಃ– ವಿದ್ಯಾ ನಾಗೇಶ ಶೇಟ್,
ವಯಸ್ಸು ಸುಮಾರು 30 ವರ್ಷ,
ಸಾಕೀನಃ– ಮನೆ ನಂ.348, ವಡಗೇರಿ, ಚಂದಾವರ,
ತಾಲೂಕುಃ– ಹೊನ್ನಾವರ, (ಉ.ಕ.).

**ಆಪಾದನೆ**

ಶ್ರೀ ಅನಿಲ್ ಜೋನ್ ಸಿಕ್ವೇರಾ., ಬಿ.ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಆರೋಪಿಯಾದ ನೀವು ಪಿರ್ಯಾದಿಯವರ ಸಂಸ್ಥೆಯಲ್ಲಿ ಸಾಲದ ಖಾತೆ ಸಂಖ್ಯೆ: .ಎಸ್.ಪಿ.ಎಲ್. ನಂ.41 ರಂತೆ ಸಾಲವನ್ನು ಪಡೆದುಕೊಂಡಿದ್ದು ಇರುತ್ತದೆ, ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ನೀವು ಪಿರ್ಯಾದಿ ಸಂಸ್ಥೆಯ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಕೆನರಾ ಬ್ಯಾಂಕ್., ಚಂದಾವರ** ಶಾಖೆಯ ಚೆಕ್ ನಂ.505072 ನ್ನು ದಿನಾಂಕ 28–06–2021 ರಂದು ರೂ. 77,600/– ಎಂದು ನಮೂದಿಸಿ ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿದ್ದು, ಅದರಂತೆ ಪಿರ್ಯಾದಿಯವರು ಹಣ ಪಡೆಯುವ ಸಲುವಾಗಿ ಸದರಿ ಚೆಕನ್ನು ಅವರ ಸಂಸ್ಥೆಯ ಖಾತೆಯಿರುವ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ., ಹೊನ್ನಾವರ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, 'Funds Insufficient' ಎಂದು ತಿಳಿಸಿ ಸದರಿ ಚೆಕನ್ನು ದಿನಾಂಕ 30–06–

2021ರಂದು ಮೆಮೋದೊಂದಿಗೆ ವಾಪಾಸ್ ನೀಡಿರುತ್ತಾರೆ. ಈ ಕುರಿತು ಪಿರ್ಯಾದಿಯವರು ನಿಮಗೆ ವಕೀಲರ ಮೂಲಕ ದಿನಾಂಕ 10-07-2021ರಂದು ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕ 13-07-2021 ರಂದು ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ನಮೂದಿಸಿದ ಹಣವನ್ನು ಸಹ ನೀಡದೇ ನೆಗೋಶಿಯೇಬಲ್ ಇನ್ ಸ್ಟ್ರುಮೆಂಟ್ ಕಾಯಿದೆ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಆರೋಪಿಯ ಉತ್ತರ : ತಿಳಿಯಿತು

ಪ್ರಶ್ನೆ 2: ಷದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಆರೋಪಿಯ ಉತ್ತರ : ವಿಚಾರಣೆಯಾಗಬೇಕು

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ)

ಸಹಿ ಇದೆ/-

**ದಿನಾಂಕಃ- 10-07-2025.**

**(ಅನಿಲ್ ಜೋನ್ ಸಿಕ್ವೇರಾ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ಯವರ ನ್ಯಾಯಾಲಯ., ಹೊನ್ನಾವರ.**

ಆರೋಪಿಯ ಸಹಿಃ- ಸಹಿ ಇದೆ

****